ಗಿಂತ ದೂರದಿಂದ ಶಾಲೆಗೆ ಬರುತ್ತಿರುವ ವಿದ್ಯಾರ್ಥಿಗಳ ಲಭ್ಯತೆ, ವಿದ್ಯಾರ್ಥಿನಿಲಯ ನಡೆಸಲು ಸೂಕ್ತ ಬಾಡಿಗೆ ಕಟ್ಟಡದ ಲಭ್ಯತೆ ಸ್ವಂತ ಕಟ್ಟಡ ನಿರ್ಮಿಸಲು ನಿವೇಶನದ ಲಭ್ಯತೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿನಿಲಯಗಳ ಮಂಜೂರಾತಿ ನೀಡಲಾಗುತ್ತಿದೆ

653 (282) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) – ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬೀಳಗಿ ತಾಲ್ಲೂಕಿನಲ್ಲಿ ಇರುವ ಪಶುವೈದ್ಯ ಚಿಕಿತ್ಸಾಲಯಗಳು ಹಾಗೂ ಪಶು ಘಟಕಗಳ ಸಂಖ್ಯೆ ಎಷ್ಟು ?

(ಆ) ಈ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

(ಇ) ಈ ಚಿಕಿತ್ಸಾಲಯಗಳಲ್ಲಿ ಅಗತ್ಯ ಸಿಬ್ಬಂದಿ ವರ್ಗ ಇದೆಯೇ ,

(ಈ) ಇಲ್ಲದಿದ್ದಲ್ಲಿ ಸರ್ಕಾರ ಕೈಗೊಳ್ಳಲಿರುವ ಕುಮಗಳೇನು ,

(ಉ) ಹೊಸ ಪಶುಚಿಕಿತ್ಸಾಲಯ ಕೇಂದ್ರ ಮಂಜೂರಾತಿಯ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ?

ಶ್ರೀ ರೇವೂನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನಾ ಸಚಿವರು) –

(ಅ) ಬೀಳಗಿ ತಾಲ್ಲೂಕಿನಲ್ಲಿ ಒಟ್ಟು 13 ಪಶುಚಿಕಿತ್ಸಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಅವುಗಳ ವಿವರ ಈ ಕೆಳಕಂಡಂತೆ ಇರುತ್ತದೆ

(1)	ಪಶು ಆಸ್ಪತ್ರೆ	01
(2)	ಪಶುಚಿಕಿತ್ಸಾಲಯಗಳು	10
(3)	ಸಂಚಾರಿ ಪಶುಚಿಕಿತ್ಸಾಲಯಗಳು	01
(4)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	01
	ಒಟ್ಟು	13

(ಆ) ಈಗಾಗಲೇ ಬೀಳಗಿ ತಾಲ್ಲೂಕಿನಲ್ಲಿ 12 ಪಶುವೈದ್ಯ ಸಂಸ್ಥೆಗಳು ಉನ್ನತೀಕರಣಗೊಂಡು ಕಾರ್ಯನಿರ್ವಹಿಸುತ್ತಿದ್ದು ಒಂದು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಸುನಗಾ, ಇದನ್ನು ಮಾತ್ರ ಮೇಲ್ದರ್ಜೆಗೇರಿಸಬೇಕಾಗಿದೆ ಇಲಾಖೆಯಲ್ಲಿ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವಿದ್ದು ಹಂತಹಂತವಾಗಿ ಮಾಡಲಾಗುತ್ತದೆ ಹೀಗೆ ಉನ್ನತೀಕರಣ ಮಾಡುವ ಸಮಯದಲ್ಲಿ ಬೀಳಗಿ ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ ಸುನಗಾ ಪ್ರಾಥಮಿಕ ಪಶುಚಿಕಿತ್ಸಾಲಯವನ್ನೂ ಮೇಲ್ದರ್ಜೆಗೇರಿಸಲು ಸಹ ಕ್ರಮವಹಿಸಲಾಗುವುದು

(ಇ) ಬೀಳಗಿ ತಾಲ್ಲೂಕಿನಲ್ಲಿ ಸಹಾಯಕ ನಿರ್ದೇಶಕರು ಮತ್ತು ಪಶುವೈದ್ಯಾಧಿಕಾರಿಗಳ ಹೊರತಾಗಿ ಉಳಿದ ಅಗತ್ಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಅಂದರೆ ಒಟ್ಟು 11 ಜನ ಪಶುವೈದ್ಯಾಧಿಕಾರಿಗಳಲ್ಲಿ 6

ಹುದ್ದೆ ಭರ್ತಿಯಾಗಿದ್ದು, 5 ಹುದ್ದೆ ಖಾಲಿ ಇದೆ ಒಂದು ಸಹಾಯಕ ನಿರ್ದೇಶಕರ ಹುದ್ದೆ ಖಾಲಿ ಇದೆ ಇತರೆ 45 ಸಿಬ್ಬಂದಿಗಳಲ್ಲಿ 43 ಜನ ಕಾರ್ಯನಿರ್ವಹಿಸುತ್ತಿದ್ದು 2 ಹುದ್ದೆ ಮಾತ್ರ ಖಾಲಿ ಇದೆ

(ಈ) ಸರ್ಕಾರದ ಆದೇಶದ ಪ್ರಕಾರ 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕಟಣೆ ಹೊರಡಿಸಲಾಗಿದೆ ಅಲ್ಲದೇ ನೇರ ನೇಮಕಾತಿ ಕೋಟಾದ ಅಡಿಯಲ್ಲೂ 90 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ನೇರ ನೇಮಕಾತಿ ಮುಖಾಂತರ ಖಾಲಿ ಹುದ್ದೆಗಳನ್ನು ತುಂಬಲು ವೇಳೆ ತಗಲುವುದರಿಂದ ಸದ್ಯಕ್ಕೆ ಖಾಲಿ ಇರುವ ಸಹಾಯಕ ನಿರ್ದೆಶಕರ ಹುದ್ದೆಗಳನ್ನು ಪಶು ವೈದ್ಯಾಧಿಕಾರಿಗಳಿಗೆ ಮುಂಬಡ್ತಿ ಮುಖೇನ ತಾತ್ಕಾಲಿಕವಾಗಿ ಸ್ವಯಂವೇತನ ಶ್ರೇಣಿಯ ಮೇರೆಗೆ (ಓಪಿಜಿ) ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ ಮತ್ತು ಪಶು ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮದಡಿ ರಾಜ್ಯಾದ್ಯಂತ 276 ಪಶು ವೈದ್ಯಾಧಿಕಾರಿಗಳನ್ನು ತುಂಬಲು ಪ್ರಕಟಣೆ ಹೊರಡಿಸಿ, ಅರ್ಜಿ ಆಹ್ವಾನಿಸಲಾಗಿದ್ದು, ಬಂದಿರುವ ಅರ್ಜಿಗಳು ಪರಿಶೀಲನೆಯಲ್ಲಿದೆ ಮುಂಬಡ್ತಿ ಪ್ರಕ್ರಿಯೆ ಹಾಗೂ ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಬೀಳಗಿ ತಾಲ್ಲೂಕಿನಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಮತ್ತು ಪಶು ವೈದ್ಯಾಧಿಕಾರಿಗಳ ಹುದ್ದೆಗೆ ನೇಮಕ ಮಾಡಲೂ ಸಹ ಕ್ರಮ ಕೈಗೊಳ್ಳಲಾಗುವುದು

(ಉ) ಸರ್ಕಾರದ ಆದೇಶ ಸಂಖ್ಯೆ ಪಸಂಮೀ 170 ಪಸಸೆ 2006 ಬೆಂಗಳೂರು, ದಿನಾಂಕ 01–03–2007ರ ಪ್ರಕಾರ ಬೀಳಗಿ ತಾಲ್ಲೂಕು ಹಗ್ಗೂರ ಗ್ರಾಮದಲ್ಲಿ ಪಶು ಚಿಕಿತ್ಸಾಲಯವನ್ನು ನೂತನವಾಗಿ ಪ್ರಾರಂಭಿಸಲಾಗಿದ

ಬೀಳಗಿ ತಾಲ್ಲೂಕಿನಲ್ಲಿ 48828 ಜಾನುವಾರು ಘಟಕಗಳಿದ್ದು ಅವುಗಳಿಗೆ ಪ್ರತಿ 500 ಜಾನುವಾರು ಘಟಕಗಳಿಗೆ ಒಂದರಂತೆ 10 ಪಶುಚಿಕಿತ್ಸಾ ಕೇಂದ್ರಗಳು ಇರಬೇಕಾಗಿದ್ದು 13ಪಶುವೈದ್ಯಕೀಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಪಶುಚಿಕಿತ್ಸಾಲಯ ಕೊರತೆ ಇರದ ಬೀಳಗಿ ತಾಲ್ಲೂಕು ಒಳಗೊಂಡಂತೆ ಇತರೆ ತಾಲ್ಲೂಕುಗಳಲ್ಲಿಯೂ ಸಹ, ಹೊಸ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಸರ್ಕಾರ ಯಾವುದೇ ಕಾಲಮಿತಿ ನಿಗದಿಪಡಿಸಿಲ್ಲ ಆದರೆ ಡಾ ಡಿ ಎಂ ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನಾ ವರದಿಯ ಪ್ರಕಾರ ಪಶುಚಿಕಿತ್ಸಾಲಯ ಕೊರತೆ ಇರುವ ಅತೀ ಹಿಂದುಳಿದ ತಾಲ್ಲುಕುಗಳಲ್ಲಿ ಮಾತ್ರ ಹೊಸ ಪಶುಚಿಕಿತ್ಸಾಲಯ ತೆರೆಯಲು ಕಾರ್ಯಕ್ರಮ ಜಾರಿಯಲ್ಲಿರುತ್ತದೆ

654 (700) ಶ್ರೀಮತಿ ಪರಿಮಳ ಕೆ ಎಸ್ (ಹನೂರು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಎಲ್ಲೆಲ್ಲಿ ಎ ಎನ್ ಎಂ ಕೇಂದ್ರಗಳಿವೆ ,

ಆ ಈ ಕೇಂದ್ರಗಳಲ್ಲಿ ಎಲ್ಲಾ ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿವೆಯೇ ,